**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿಸಿ ನಂಬರ ಃ 55 /2019**

| | | | |
|---|---|---|---|
| ಸಾಕ್ಷಿಯ ಹೆಸರು | ಃ ರುದ್ರಾ ನಾಯ್ಕ | ಸಿ.ಡಬ್ಲ್ಯು | 10 |
| ತಂದೆಯ ಹೆಸರು | ಃ ಸೇವ್ಯಾ ನಾಯ್ಕ | ಪಿ.ಡಬ್ಲ್ಯು | 8 |
| ವಯಸ್ಸು | ಃ 52 ವರ್ಷ | | |
| ಉದ್ಯೋಗ | ಃ ವ್ಯವಸಾಯ | | |
| ವಾಸ ಸ್ಥಳ | ಃ ಬೇಲೆನಹಳ್ಳಿ ತಾಂಡ್ಯ | | |

**ದಿನಾಂಕಃ 10-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಚಾಸಾ-1 ರವರ ಪರಿಚಯ ಇಲ್ಲ. ಆರೋಪಿಯ ಪರಿಚಯ ಇದೆ ಅವರು ನಮ್ಮದೇ ಊರಿನವರು. ಆರೋಪಿ ಏನೂ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ, ಚಾಸಾ-1 ಮತ್ತು ಆರೋಪಿಯ ನಡುವೆ ಆಗಿದ ಎನ್ನಲಾಗುವ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ, ಮತ್ತು ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೂಡ ನೀಡಿಲ್ಲ. ಚಾಸಾ-4 ರಿಂದ 8 ರವರ ಪರಿಚಯ ಇದೆ, ಅವರೂ ಕೂಡಾ ನಮ್ಮದೇ ಊರಿನವರು ಇರುತ್ತಾರೆ. ಆರೋಪಿ ಚೀಟಿ ವ್ಯವಹಾರ ಮಾಡುತ್ತಾರೆ ಎಂದರೆ ಎಂದರೆ ನನಗೆ ಗೊತ್ತಿಲ್ಲ, ಚಾಸಾ-1 ಅವರ ಬಳಿ ಚೀಟಿ ಹಾಕಿದ ಬಗ್ಗೆ ಕೂಡಾ ನನಗೆ ಗೊತ್ತಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-**

ಚಾಸಾ-1 ಮತ್ತು ಆರೋಪಿ ನಡುವೆ ಆಗಿರುವ ಚೀಟಿ ವ್ಯವಹಾರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ. ಆರೋಪಿ ಚಾಸಾ-1 ಮತ್ತು ಇತರೇ ಸದಸ್ಯರಿಂದ ಪ್ರತಿತಿಂಗಳು ಚೀಟಿ ರೂಪದಲ್ಲಿ ಹಣವನ್ನು ವಸೂಲಿ ಮಾಡುತ್ತಿದ್ದ ಎಂದರೆ ಎಂದರೆ ಸರಿಯಲ್ಲ. ಅದಕ್ಕೆ ಆರೋಪಿಯ ಮಕ್ಕಳು ಕೂಡ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ-1 ರವರು 2015 ರಲ್ಲಿ ನಿವೃತ್ತಿ ಆದ ನಂತರ ತಮ್ಮ 1,05,000/- ಹಣವನ್ನು ಒಂದು ಚೀಟಿಯಲ್ಲಿ ಮತ್ತು 1,02,000/- ಹಣವನ್ನು ಇನ್ನೊಂದು ಚೀಟಿಯಲ್ಲಿ ಹಾಕಿದ್ದರು ಎಂದರೆ ಸರಿಯಲ್ಲ. ಹಣವನ್ನು ಮರುಪಾವತಿ ಮಾಡದೇ ಚಾಸಾ-1 ರವರಿಗೆ ತೊಂದರೆ ಕೊಟ್ಟಿದಾರೆ ಎಂದರೆ ಸರಿಯಲ್ಲ. ಇದೇ ರೀತಿ ದಿನಾಂಕ 20-04-2016 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಕೂಡಾ ಆರೋಪಿ ನಮ್ಮ ಊರಿನವರು ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆ ಭಾಗವನ್ನು ನಿಪಿ.8 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

**<u>ಮರುವಿಚಾರಣೆ :</u>** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ**
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**